# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1626 |
| ಉತ್ತರಿಸಬೇಕಾದ ದಿನಾಂಕ | 18.03.2026 |
| ಸದಸ್ಯರ ಹೆಸರು | ಶ್ರೀ ಡಾ:ಕೆ.ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಕೊಳಗೇರಿ ಪ್ರದೇಶಗಳು ಎಷ್ಟು; ಈ ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರಗಳನ್ನು ನೀಡುವುದು) | ರಾಜ್ಯದಲ್ಲಿ ಒಟ್ಟು 3025 ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದ್ದು, ಅವುಗಳ ಪೈಕಿ 2866 ಕೊಳಗೇರಿ ಪ್ರದೇಶಗಳನ್ನು ಮಂಡಳಿ ಕಾಯ್ದೆಯಡಿ ಘೋಷಿಸಲಾಗಿರುತ್ತದೆ.<br><br>ಈ ಕೊಳಗೇರಿ ಪ್ರದೇಶಗಳಲ್ಲಿ 2011ನೇ ಸಾಲಿನ ಎಸ್.ಇ.ಎಸ್. ಸರ್ವೆ ಪ್ರಕಾರ 40.50 ಲಕ್ಷಗಳ ಜನರು ವಾಸಿಸುತ್ತಿದ್ದು,ಜಿಲ್ಲಾವಾರು ವಿವರಗಳನ್ನು ಅನುಬಂಧ – ಅ ರಲ್ಲಿ ಒದಗಿಸಿದೆ. |
| ಆ) | ಕೊಳಗೇರಿ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು "ಕೊಳಗೇರಿ ಅಭಿವೃದ್ಧಿ ಮಂಡಳಿ"ಯನ್ನು ರಚಿಸಿ 51 ವರ್ಷವಾಗಿದ್ದು, ಇಲ್ಲಿಯವರಿಗೆ ಕೊಳಗೇರಿ ಮುಕ್ತ ಆದ ಸ್ಥಳಗಳ ಸಂಖ್ಯೆ ಎಷ್ಟು ಇನ್ನೂ ಅಭಿವೃದ್ಧಿಯಾಗದ ಸ್ಥಳಗಳ ಸಂಖ್ಯೆ ಎಷ್ಟು; "ಕೊಳಗೇರಿ ಅಭಿವೃದ್ಧಿ ಮಂಡಳಿ" ಸ್ಥಾಪನೆಯ ಉದ್ದೇಶ ಈಡೇರಿದೆಯೇ; (ವಿವರಗಳನ್ನು ನೀಡುವುದು) | ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು 1975ರಲ್ಲಿ ಸ್ಥಾಪನೆಯಾಗಿದ್ದು 2025 ಜುಲೈ ಮಾಹೆಗೆ 50 ವರ್ಷ ಪೂರೈಸಿದ್ದು, ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ನಿವಾಸಿಗಳಿಗೆ ವಸತಿ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐಇಸಿ) ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಅವರಲ್ಲಿ ಸಾಮಾಜಿಕ ಅರಿವು ಮೂಡಿಸಿ, ಅವರ ಜೀವನ ಮಟ್ಟವನ್ನು ಹೆಚ್ಚಿಸುವುದು ಮಂಡಳಿ ಉದ್ದೇಶವಾಗಿರುತ್ತದೆ.<br>**ಕೊಳಗೇರಿ ಸುಧಾರಣೆ ಯೋಜನೆ:- (ಅಭಿವೃದ್ಧಿ ಕಾಮಗಾರಿ)**<br><br>ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ಕೊಳಗೇರಿ ಗುಣಲಕ್ಷಗಳನ್ನು ಹೊಂದಿರುವ ಕೊಳಚೆ ಪ್ರದೇಶಗಳನ್ನು ಗುರುತಿಸಿ, ಮಂಡಳಿಯ ಕಾಯ್ದೆಯಡಿ ಘೋಷಣೆ ಹೊರಡಿಸಿ, ಕೊಳಗೇರಿ ಸುಧಾರಣೆ ಯೋಜನೆಯಡಿ ಸರ್ಕಾರವು ಆಯವ್ಯಯದಲ್ಲಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ರಾಜ್ಯಾದ್ಯಂತ ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳಾದ ರಸ್ತೆ, ಚರಂಡಿ, ಒಳಚರಂಡಿ, ಕುಡಿಯುವ ನೀರು, ಬೀದಿ ದೀಪ, ಸಮುದಾಯ ಭವನ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಿಯಾ ಯೋಜನೆ ತಯಾರಿಸಿ, ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲಾಗಿರುತ್ತದೆ.<br><br>ಅದರಂತೆ, ಕಳೆದ 7 ವರ್ಷಗಳಿಂದ ಇಲ್ಲಿಯವರೆಗೆ ಒಟ್ಟು 1210 ಕೊಳಗೇರಿ ಪ್ರದೇಶಗಳಲ್ಲಿ ರೂ. 408.28 ಕೋಟಿಗಳ ಅಂದಾಜು ವೆಚ್ಚದಲ್ಲಿ 794 ಮೂಲಭೂತ ಸೌಲಭ್ಯ ಒದಗಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಭಾಗಶ: ಅಭಿವೃದ್ಧಿ |
| ಇ) | ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಿ ಕೊಡಬೇಕೆಂಬ ಗುರಿಯನ್ನು ಹಾಕಿಕೊಳ್ಳಲಾಗಿದೆ; ಎಷ್ಟು ಮನೆಗಳನ್ನು ಪೂರ್ಣಗೊಳಿಸಿ ಹಕ್ಕುಪತ್ರಗಳನ್ನು ನೀಡಲಾಗಿದೆ; | |

| | | ಪಡಿಸಲಾಗಿರುತ್ತದೆ. ಆಯವ್ಯಯದಲ್ಲಿ ಒದಗಿಸುವ ಅನುದಾನವನ್ನು ಬಳಸಿಕೊಂಡು ಹಂತ - ಹಂತವಾಗಿ ಅಭಿವೃದ್ಧಿ ಪಡಿಸಲಾಗುವುದು. |
|---|---|---|

**ವಸತಿ ಸೌಲಭ್ಯ :-**

ಕರ್ನಾಟಕ ರಾಜ್ಯಾದ್ಯಂತ ವಿವಿಧ ನಗರ / ಪಟ್ಟಣಗಳ ವ್ಯಾಪ್ತಿಯಲ್ಲಿ ಬರುವ ಆಯ್ದ ಘೋಷಿತ ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 2007-08ನೇ ಸಾಲಿನಿಂದ 2014-15ನೇ ಸಾಲಿನವರೆವಿಗೂ ಕೇಂದ್ರ ಪುರಸ್ಕೃತ ವಿವಿಧ ವಸತಿ ಯೋಜನೆಗಳಡಿ 382 ಕೊಳಗೇರಿ ಪ್ರದೇಶಗಳಲ್ಲಿ ಕಚ್ಚಾ - ಸೆಮಿಪಕ್ಕ ಮನೆಗಳನ್ನು ತೆರವುಗೊಳಿಸಿ, ಪಕ್ಕ ಮನೆಗಳನ್ನು ನಿರ್ಮಿಸಲಾಗಿದ್ದು, ವಿವರಗಳನ್ನು ಈ ಕೆಳಕಂಡಂತಿವೆ.

| ಕ್ರ. ಸಂ | ಯೋಜನೆ | ನಿರ್ಮಿಸಿರುವ ಮನೆಗಳ ಸಂಖ್ಯೆ | ಹಂಚಿಕೆ ಮಾಡಿರುವ ಮನೆಗಳ ಸಂಖ್ಯೆ | ಕೊಳಗೇರಿ ಪ್ರದೇಶಗಳ ಸಂಖ್ಯೆ |
|---|---|---|---|---|
| 1 | ಬಿ.ಎಸ್. ಯು.ಪಿ. | 23315 | 23315 | 133 |
| 2 | ಐ.ಹೆಚ್.ಎಸ್.ಡಿ.ಪಿ | 17237 | 17237 | 172 |
| 3 | ರಾಜೀವ್ ಆವಾಸ್ ಯೋಜನೆ | 19897 | 19182 | 77 |
| | ಒಟ್ಟು | **60449** | **59734** | **382** |

715 ಮನೆಗಳು ಹಂಚಿಕೆಗೆ ಬಾಕಿ ಇರುತ್ತದೆ.

ಪ್ರಸ್ತುತ ರಾಜ್ಯವನ್ನು ಸ್ಲಂ ಮುಕ್ತಗೊಳಿಸಲು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ರಾಜ್ಯಾದ್ಯಂತ ಬರುವ ಆಯ್ದ ಘೋಷಿತ ಕೊಳಗೇರಿ ಪ್ರದೇಶಗಳಲ್ಲಿ ಕಚ್ಚಾ-ಸೆಮಿಪಕ್ಕ ಮನೆಗಳಲ್ಲಿ ವಾಸಿಸುತ್ತಿರುವ ಕೊಳಗೇರಿ ನಿವಾಸಿಗಳಿಗೆ ಬೇಡಿಕೆಯಂತೆ, ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯನ್ನು ರಾಜ್ಯ ಸರ್ಕಾರದ ವಸತಿ ಯೋಜನೆಗಳಾದ ಡಾ: ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ಸಂಯೋಜನೆಗೊಳಿಸಿ ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

ಅದರಂತೆ, ಒಟ್ಟು 295 ಯೋಜನೆಗಳಲ್ಲಿ 1,80,253 ಮನೆಗಳನ್ನು ನಿರ್ಮಾಣ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ವಿವಿಧ ಹಂತಗಳಲ್ಲಿ ಅನುಮೋದನೆ ದೊರಕಿರುತ್ತದೆ. ಅವುಗಳಲ್ಲಿ 1653 ಮನೆಗಳು ಕೇಂದ್ರದಿಂದ ಕಡತಗೊಂಡಿರುತ್ತದೆ. ಅದರಂತೆ 1,78,600 ಮನೆಗಳಲ್ಲಿ 1,29,986 ಮನೆಗಳನ್ನು ಪ್ರಾರಂಭಿಸಿದ್ದು, 86,651 ಮನೆಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ 43,335 ಮನೆಗಳ ನಿರ್ಮಾಣ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. 48,614 ಮನೆಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.

| | | |
|---|---|---|
| | | ಒಟ್ಟಾರೆ ಪೂರ್ಣಗೊಂಡಿರುವ 86,651 ಮನೆಗಳ ಪೈಕಿ 36,789 ಮನೆಗಳನ್ನು ಪ್ರಥಮ ಹಂತದಲ್ಲಿ ಮಾರ್ಚ್ 2024 ರಲ್ಲಿ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. 2026 ಜನವರಿ ಮಾಹೆಯಲ್ಲಿ 42,345 ಮನೆಗಳನ್ನು ಲೋಕಾರ್ಪಣೆ ಮಾಡಲಾಗಿರುತ್ತದೆ. ಬಾಕಿ ಮನೆಗಳನ್ನು 7,517 ಮನೆಗಳನ್ನು 3ನೇ ಹಂತದಲ್ಲಿ ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ. ಪ್ರಗತಿಯಲ್ಲಿರುವ ಮನೆಗಳನ್ನು ಕೇಂದ್ರ ಸರ್ಕಾರ ಸೆಪ್ಟೆಂಬರ್ 2026 ರೊಳಗೆ ಪೂರ್ಣಗೊಳಿಸಲು ನಿಗಧಿಪಡಿಸಿರುವಂತೆ, ಸದರಿ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು.<br><br>ವಾಸಕ್ಕೆ ಯೋಗ್ಯವಲ್ಲದ ಕೊಳಗೇರಿ ಪ್ರದೇಶಗಳನ್ನು ಗುರುತಿಸಿ, ಮಂಡಳಿ ಕಾಯ್ದೆಯಡಿ ಘೋಷಿಸಿ, ಅಗತ್ಯ ಮೂಲಭೂತ ಸೌಕರ್ಯ ಒದಗಿಸಿ, ಸಮಗ್ರವಾದ ಅಭಿವೃದ್ಧಿ ಪಡಿಸಲು ಕ್ರಮ ವಹಿಸಲಾಗುತ್ತಿದೆ. ಅದರಂತೆ, ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 39 ಕೊಳಗೇರಿ ಪ್ರದೇಶಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಿ, ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ-ಆ ದಲ್ಲಿ ಒದಗಿಸಿದೆ.<br><br>ಸದರಿ ಯೋಜನೆಯಡಿ ಈಗಾಗಲೇ ಹಂಚಿಕೆಯಾದ ಮನೆಗಳು in-situ / Relocation ಮಾದರಿಯಲ್ಲಿ ನಿರ್ಮಿಸಿರುವುದರಿಂದ ಸದರಿ ಫಲಾನುಭವಿಗಳಿಗೆ ಮನೆ ಹಂಚಿಕಾತಿ ಪತ್ರ ನೀಡಲಾಗುತ್ತಿದೆ. |
| ಈ) | ಕಳೆದ ಐದು ವರ್ಷಗಳಲ್ಲಿ ಕೊಳಗೇರಿ ಪ್ರದೇಶಗಳ ಅಭಿವೃದ್ಧಿಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ: ಕೊಳಗೇರಿ ಮುಕ್ತ ಕರ್ನಾಟಕ ಮಾಡಲು ಸರ್ಕಾರ ಮುಂದಾಗುವುದೇ? | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಆಯವ್ಯದಲ್ಲಿ ಕೊಳಗೇರಿ ಸುಧಾರಣೆ ಯೋಜನೆಯಡಿ ಒದಗಿಸುವ ಅನುದಾನಕ್ಕನುಗುಣವಾಗಿ ಕ್ರಿಯಾ ಯೋಜನೆ ತಯಾರಿಸಿ, ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯ ಕಾಮಗಾರಿಗಳನ್ನು ಕೈಗೆತ್ತಿಕೊಂಡು ನಿರ್ವಹಿಸಲಾಗುತ್ತಿದೆ. ಅದರಂತೆ, ಕೊಳಗೇರಿ ಸುಧಾರಣೆ ಯೋಜನೆಯಡಿ ಕಳೆದ 5 ವರ್ಷಗಳಲ್ಲಿ (2020-21ನೇ ಸಾಲಿನಿಂದ 2024-25ನೇ ಸಾಲಿನವರೆಗೆ) ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳಿಗೆ ಒಟ್ಟು 334.61 ಕೋಟಿಗಳನ್ನು ಖರ್ಚು ಮಾಡಲಾಗಿದೆ. ಮುಂದಿನ ಆಯವ್ಯಯದಲ್ಲಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ಹಂತ-ಹಂತವಾಗಿ ಅಭಿವೃದ್ಧಿ ಪಡಿಸಲಾಗುವುದು. |

ಸಂಖ್ಯೆ: ವಇ 24 ಎಸ್‌ಬಿಎಂ 2026

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

## ಅನುಬಂಧ 'ಅ'

| ಕ್ರ.ಸಂ | ಜಿಲ್ಲೆ ಹೆಸರು | ಒಟ್ಟು ಕೊಳಚೆ ಪ್ರದೇಶಗಳ ಸಂಖ್ಯೆ | ಘೋಷಿತ ಕೊಳಚೆ ಪ್ರದೇಶಗಳ ಸಂಖ್ಯೆ | ಗುರುತಿಸಿರುವ ಕೊಳಚೆ ಪ್ರದೇಶಗಳ ಸಂಖ್ಯೆ | ಜನ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು ನಗರ | 435 | 413 | 22 | 1536545 |
| 2 | ಬೆಂಗಳೂರು ಗ್ರಾಮಾಂತರ | 33 | 33 | 0 | 54434 |
| 3 | ಬಾಗಲಕೋಟೆ | 104 | 104 | 0 | 47760 |
| 4 | ಬಳ್ಳಾರಿ | 92 | 89 | 3 | 68671 |
| 5 | ಬೆಳಗಾವಿ | 252 | 194 | 58 | 127943 |
| 6 | ಬೀದರ | 68 | 68 | 0 | 83528 |
| 7 | ಚಿಕ್ಕಬಳ್ಳಾಪುರ | 46 | 44 | 2 | 39558 |
| 8 | ಚಿಕ್ಕಮಗಳೂರು | 54 | 54 | 0 | 55977 |
| 9 | ಚಿತ್ರದುರ್ಗ | 69 | 64 | 5 | 75819 |
| 10 | ಚಾಮರಾಜನಗರ | 67 | 66 | 1 | 50552 |
| 11 | ದಾವಣಗೆರೆ | 80 | 80 | 0 | 71471 |
| 12 | ಧಾರವಾಡ | 138 | 138 | 0 | 229173 |
| 13 | ದಕ್ಷಿಣ ಕನ್ನಡ | 26 | 23 | 3 | 21309 |
| 14 | ಗದಗ | 102 | 87 | 15 | 43610 |
| 15 | ಹಾಸನ | 105 | 105 | 0 | 152986 |
| 16 | ಹಾವೇರಿ | 107 | 103 | 4 | 45162 |
| 17 | ಕಲಬುರಗಿ | 149 | 148 | 1 | 206207 |
| 18 | ಕೊಡಗು | 10 | 10 | 0 | 3681 |
| 19 | ಕೋಲಾರ | 61 | 61 | 0 | 58225 |
| 20 | ಕೊಪ್ಪಳ | 51 | 46 | 5 | 70231 |
| 21 | ಮಂಡ್ಯ | 57 | 56 | 1 | 50982 |
| 22 | ಮೈಸೂರು | 115 | 115 | 0 | 89634 |
| 23 | ರಾಯಚೂರು | 94 | 82 | 12 | 109413 |
| 24 | ರಾಮನಗರ | 55 | 51 | 4 | 27383 |
| 25 | ಶಿವಮೊಗ್ಗ | 167 | 164 | 3 | 144419 |
| 26 | ತುಮಕೂರು | 130 | 128 | 2 | 129652 |
| 27 | ಉತ್ತರ ಕನ್ನಡ | 49 | 41 | 8 | 32473 |
| 28 | ಉಡುಪಿ | 17 | 17 | 0 | 27368 |
| 29 | ವಿಜಯಪುರ | 132 | 122 | 10 | 258520 |
| 30 | ವಿಜಯನಗರ | 111 | 111 | 0 | 85647 |
| 31 | ಯಾದಗಿರಿ | 49 | 49 | 0 | 51467 |
| | ಒಟ್ಟು | 3025 | 2866 | 159 | 4050000 |

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಅನುಬಂಧ - 4

# ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

## ಅಭಿವೃದ್ಧಿ ಪಡಿಸಿ ಬಿ.ಬಿ.ಎಂ.ಪಿ ಗೆ ಹಸ್ತಾಂತರಿಸಿರುವ ಕೊಳಚೆ ಪ್ರದೇಶಗಳ ವಿವರ.

| ಕ್ರಮ ಸಂಖ್ಯೆ | ಪ್ರದೇಶದ ಹೆಸರು |
|---|---|
| 1 | ಮುನಿಪಾಪಮ್ಮ ಗಾರ್ಡನ್ |
| 2 | ಮಿನರ್ವ ಟ್ಯಾಕೀಸ್ ಹಿಂಭಾಗ |
| 3 | ವಿನೋಭಾ ಗಾರ್ಡನ್ |
| 4 | ರಾಮಕ್ಕ ತೋಟ |
| 5 | ಕೋದಂಡರಾಮಪಾಳ್ಯ |
| 6 | ಕೊಂಡಪ್ಪ ಅಚ್ಚಪ್ಪ ಗಾರ್ಡನ್ |
| 7 | ಬೆಟ್ಟಪ್ಪ ಗಾರ್ಡನ್ |
| 8 | ಚಿನ್ನಪ್ಪ ಗಾರ್ಡನ್ |
| 9 | ಕೃಷ್ಣಪ್ಪ ಗಾರ್ಡನ್ |
| 10 | ಮುನಿ ನಾರಯಣಪ್ಪ ಗಾರ್ಡನ್ |
| 11 | ಮುನೇಶ್ವರ ಬ್ಲಾಕ್ |
| 12 | ಮಹಾರಾಜ ಮಿಲ್ಸ್ |
| 13 | ಆಂಜನೇಯ ಬ್ಲಾಕ್ |
| 14 | ವಾಹನ್ ಗಾರ್ಡನ್ |
| 15 | ಕೆ.ಜಿ ಬ್ಯಾಡರಹಳ್ಳಿ |
| 16 | ಪಲ್ಲವಿ ಟ್ಯಾಕೀಸ್ ಹಿಂಭಾಗ |
| 17 | ಗೋವಿಂದರಾಜನಗರ 1ನೇ ಹಂತ |
| 18 | ಗೋವಿಂದರಾಜನಗರ 2ನೇ ಹಂತ |
| 19 | ಗೌಸ್ ಲ್ಯಾಂಡ್, ಓಕಳೀಪುರ |
| 20 | ಕೆಂಚಪ್ಪ ಗಾರ್ಡನ್ |
| 21 | ಆಂಜನೇಯಪ್ಪ ಗಾರ್ಡನ್ |
| 22 | ನಾಗಮ್ಮ ನಗರ |
| 23 | ವೀರಕೇಸರಿ, ಕೊನ್ನಾರಪೇಟೆ |
| 24 | ಮಾಯಾಬಜಾರ್, ಆಸ್ಟಿಸ್ ಟೌನ್ |
| 25 | ಪ್ರಿಯದರ್ಶಿನಿ ಬನ್ನೇರುಘಟ್ಟ ರಸ್ತೆ |
| 26 | ಸರ್ವೆ ನಂ:63, ಆಡುಗೋಡಿ |
| 27 | ಹೊಂಬೇಗೌಡ ನಗರ |
| 28 | ಪುಟ್ಟಯ್ಯನ ಪಾಳ್ಯ |
| 29 | ಶಾಸ್ತ್ರಿ ನಗರ |
| 30 | ಅಗ್ರಹಾರ ದಾಸರಹಳ್ಳಿ |
| 31 | ಗಜಾನನ ಟ್ಯಾಕೀಸ್ |
| 32 | ರುದ್ರೇಶ್ವರ ಟ್ಯಾಕೀಸ್ |
| 33 | ಪ್ರಗತಿಪುರ |
| 34 | ಕಮಲಾನಗರ ಸರ್ವೆ ನಂ:46 |
| 35 | ಚಂದ್ರು ನಗರ ಸರ್ವೆ ನಂ:46 |
| 36 | ಸಾಣಿಗುರುಚನ ಹಳ್ಳಿ ನಂ: 30,31 |
| 37 | ಎಂ.ಜಿ ನಗರ |
| 38 | ಕರೀಸಂದ್ರ |
| 39 | ಎ.ಕೆ ಕಾಲೋನಿ |

Commissioner
Karnataka Slum Development Board
Bengaluru